ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ : ಸಿಪಿಐ/ಇ–ಆಡಳಿತ/ಹೆಚ್.ಆರ್.ಎಂ.ಎಸ್–9/07–08 ದಿನಾಂಕ : 28–08–2007

# ಜ್ಞಾಪನಾ

ವಿಷಯ : **2007–08 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಹೆಚ್.ಆರ್.ಎಂ.ಎಸ್ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಒಂದು ತಿಂಗಳಿಗಾಗಿ ಡಾಟಾ ಎಂಟ್ರಿ ಆಪರೇಟರ್ ಹಾಗೂ ಮುದ್ರಣ ಮತ್ತು ಸ್ಟೇಷನರಿಗಾಗಿ ಆಯವ್ಯಯ ಬಿಡುಗಡೆ ಮಾಡಿರುವ ಬಗ್ಗೆ.**

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ ಇಡಿ122.ಹೋಯೋಕಾ 2007 ಬೆಂಗಳೂರು ದಿನಾಂಕ : 04–04–2007 (ಇಡಿ ಸ್ಕೀಮರ್ (ಯುನಿಕ್) 2007) ದಿನಾಂಕ :04–04–2007
2. 2007–08 ನೇ ವರ್ಷದ ಆಯವ್ಯಯ ದಾಖಲೆಗಳಿಗೆ ತಿದ್ದೋಲೆ

*****

2007–08 ನೇ ಸಾಲಿನಲ್ಲಿ ಉಲ್ಲೇಖಗಳನ್ವಯ ಸರ್ಕಾರದ ಆದೇಶದಲ್ಲಿ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಹೆಚ್.ಆರ್.ಎಂ.ಎಸ್ ಕಡ್ಡಾಯವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಒಂದು ತಿಂಗಳ ಡಾಟಾ ಎಂಟ್ರಿ ಆಪರೇಟರ್ ಹೊರಗುತ್ತಿಗೆಗಾಗಿ ಹಾಗೂ ಸದರಿ ಕಾರ್ಯದ ಮುದ್ರಣ ಮತ್ತು ಸ್ಟೇಷನರಿ ಖರೀದಿಸುವ ಸಲುವಾಗಿ "ಪರಿವೀಕ್ಷಣೆ ಪ್ರಾಥಮಿಕ" ಲೆಕ್ಕ ಶೀರ್ಷಿಕೆ 2202–01–104–0–00–059 (ಯೋಜನೆ) ಯಲ್ಲಿ ರೂ. 10.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಈ ಹಣದಲ್ಲಿ ರಾಜ್ಯದಲ್ಲಿನ ಎಲ್ಲಾ 202 ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಅಗತ್ಯವಿರುವ ಒಂದು ತಿಂಗಳ ಡಾಟಾ ಎಂಟ್ರಿ ಆಪರೇಟರ್ ಹೊರಗುತ್ತಿಗೆ ಮತ್ತು ಮುದ್ರಣ ಮತ್ತು ಸ್ಟೇಷನರಿ ಖರೀದಿಸಲು ಆಯವ್ಯಯ ಹಣ ರೂ.10.10 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳಿಗೆ ಹಂಚಿಕೆ ಮಾಡಿ ಅನುಬಂಧದಲ್ಲಿ ವಿವರಿಸಿರುವಂತೆ ಡ್ರಾ ಮಾಡಿ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮರುಹಂಚಿಕೆ ಮಾಡಲು ಅನುಮತಿ ನೀಡಲಾಗಿದೆ.

ಹೆಚ್.ಆರ್.ಎಂ.ಎಸ್ ಅನುಷ್ಠಾನಕ್ಕಾಗಿ ಒಂದು ತಿಂಗಳ ಡಾಟಾ ಎಂಟ್ರಿ ಆಪರೇಟರ್ ಹೊರಗುತ್ತಿಗೆಗಾಗಿ ಮತ್ತು ಮುದ್ರಣ ಕಾರ್ಯ ಮತ್ತು ಸ್ಟೇಷನರಿ ಖರೀದಿಸುವ ಪೂರ್ವದಲ್ಲಿ ಈ ಕೆಳಕಂಡ ಷರತ್ತುಗಳನ್ನು ತಪ್ಪದೇ ಪಾಲಿಸುವುದು.

1. ಅನುಬಂಧದಲ್ಲಿ ಹಂಚಿಕೆ ಮಾಡಿರುವ ಹಣವನ್ನು ಈ ಕೆಳಕಂಡ ಬಾಬ್ತುಗಳಿಗೆ ಉಪಯೋಗಿಸುವುದು.

| | ಒಂದು ತಿಂಗಳ ಡಾಟಾ ಎಂಟ್ರಿ ಆಪರೇಟರ್ ಹೊರಗುತ್ತಿಗೆ ರೂ. | ಮುದ್ರಣ ಕಾರ್ಯಕ್ಕೆ ಮತ್ತು ಸ್ಟೇಷನರಿ ಖರೀದಿಗೆ ರೂ. | ಒಟ್ಟು ರೂ. |
|---|---|---|---|
| 1.ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ | 3000=00 | 2000=00 | 5000=00 |

ಈ ಮೇಲಿನ ಮೊತ್ತದಲ್ಲಿ ಹೆಚ್.ಆರ್.ಎಂ.ಎಸ್ ಅನುಷ್ಠಾನಕ್ಕಾಗಿ ಒಂದು ತಿಂಗಳ ಅವಧಿಗೆ ಡಾಟಾ ಎಂಟ್ರಿ ಆಪರೇಟರ್‌ನ್ನು ಹೊರಗುತ್ತಿಗೆ ಮಾಡಲು ಹಾಗೂ ಮುದ್ರಣ ಕಾರ್ಯಕ್ಕೆ ಮತ್ತು ಸ್ಟೇಷನರಿ ಖರೀದಿಸಲು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳಿಗೆ ಹಣ ಬಿಡುಗಡೆ ಮಾಡಿದೆ.

2. ಜಿಲ್ಲಾ ಉಪನಿರ್ದೇಶಕರು ಸದರಿ ಹಣವನ್ನು ಅನುಬಂಧ–1 ರ ರಲ್ಲಿ ಒದಗಿಸಿರುವ ವಿವರದಂತೆ ತಾಲ್ಲೂಕುವಾರು ಮರುಹಂಚಿಕೆ ಮಾಡುವುದು.
3. ಬಿಡುಗಡೆ ಮಾಡಿರುವ ಹಣದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೆಚ್.ಆರ್.ಎಂ.ಎಸ್ ಯೋಜನೆಯ ಅನುಬಂಧ–1, ಅನುಬಂಧ–2, ಅನುಬಂಧ–3 ರ ಮಾಹಿತಿಯನ್ನು ಡಾಟಾ ಎಂಟ್ರಿ ಆಪರೇಟರ್‌ನ್ನು ಹೊರಗುತ್ತಿಗೆ ಮಾಡಿ ಹೆಚ್.ಆರ್.ಎಂ.ಎಸ್ ತಂತ್ರಾಂಶಕ್ಕೆ ಕಡ್ಡಾಯವಾಗಿ ಅಳವಡಿಸಲು ಹಾಗೂ ಅನುಬಂಧ–1, ಅನುಬಂಧ–2, ಅನುಬಂಧ–3 ಮುದ್ರಣ ಕಾರ್ಯಕ್ಕೆ ಸ್ಟೇಷನರಿ ಖರೀದಿಸಲು ಉಪಯೋಗಿಸುವುದು.

4. ದಿನಾಂಕ : 30-09-2007 ರೊಳಗಾಗಿ ಬಿಡುಗಡೆ ಮಾಡಿರುವ ಆಯವ್ಯಯವನ್ನು ಖರ್ಚುಮಾಡಿ ಅದಕ್ಕೆ ಸಂಬಂಧಿಸಿದ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ತಪ್ಪದೇ ಕಳುಹಿಸುವುದು.
5. ಜಿಲ್ಲಾ ಉಪನಿರ್ದೇಶಕರು ಸದರಿ ಆಯವ್ಯಯವನ್ನು ಬಿಳಿ ಬಣ್ಣದ ಎ.ಸಿ ಬಿಲ್ಲಿನ ಮುಖಾಂತರ ರಾಜ್ಯ ಸಂಚಿತ ನಿಧಿಗೆ ನೇರವಾಗಿ ಖರ್ಚು ಹಾಕಿ ಹಣ ಡ್ರಾ ಮಾಡುವುದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮರುಹಂಚಿಕೆ ಮಾಡುವುದು.
6. ಬಿಡುಗಡೆ ಮಾಡಿರುವ ಆಯವ್ಯಯವನ್ನು ಆಯಾ ಬಾಬ್ತುಗಳಿಗೆ ಮಾತ್ರ ಬಳಕೆ ಮಾಡುವುದು ಇನ್ನಿತರ ಕಾರ್ಯಗಳಿಗೆ ಉಪಯೋಗಿಸುವಂತಿಲ್ಲ.
7. ಮೇಲೆ ನಿಗಧಿ ಮಾಡಿರುವ ಅವಧಿಯಲ್ಲಿ ಈ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಪ್ರಥಮ ಆದ್ಯತೆ ನೀಡುವುದು.
8. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಬಳಸದೇ ಲ್ಯಾಪ್ಸ್ ಮಾಡಿದಲ್ಲಿ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಡಾಟಾ ಎಂಟ್ರಿ ಆಪರೇಟರ್ ಹೊರಗುತ್ತಿಗೆಗಾಗಿ ಹಾಗೂ ಮುದ್ರಣ ಕಾರ್ಯಕ್ಕೆ ಮತ್ತು ಸ್ಟೇಷನರಿ ಖರೀದಿಸಲು ಖಜಾನೆಯಿಂದ ಹಣ ಡ್ರಾಮಾಡಲು ವಿಫಲವಾದ್ದಲ್ಲಿ ಈ ಹಣವನ್ನು ಯಾವುದೇ ಕಾರಣಕ್ಕೂ ಮುಂದಿನ ಆರ್ಥಿಕ ವರ್ಷದಲ್ಲಿ ಈ ಕಛೇರಿಯಿಂದ ಹಣ ಬಿಡುಗಡೆ ಮಾಡಲಾಗುವುದಿಲ್ಲ. ಇಂತಹ ಬೇಡಿಕೆಗಳನ್ನು ಸಲ್ಲಿಸದಂತೆ ಮುಂಜಾಗ್ರತೆ ವಹಿಸುವುದು.
9. ಡಾಟಾ ಎಂಟ್ರಿ ಆಪರೇಟರ್ ಹೊರಗುತ್ತಿಗೆಗಾಗಿ ಹಾಗೂ ಮುದ್ರಣ ಕಾರ್ಯಕ್ಕೆ ಮತ್ತು ಸ್ಟೇಷನರಿ ಖರೀದಿಸುವ ಸಂಧರ್ಭದಲ್ಲಿ ಖರೀದಿ ನಿಯಮಗಳನ್ನು ತಪ್ಪದೇ ಪಾಲಿಸುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
10. ಸಾದಿಲ್ವಾರು ಬಿಲ್ಲಿಗೆ ಮೇಲು ರುಜು ಅಗತ್ಯವಿದ್ದಲ್ಲಿ ಅದನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯವರಿಂದ ಮೇಲು ಸಹಿ ಪಡೆದುಕೊಳ್ಳುವುದು.
11. ನಿಮ್ಮ ಜಿಲ್ಲೆಗೆ ಒದಗಿಸಿದ ಆಯವ್ಯಯವನ್ನು ಸಕಾಲದಲ್ಲಿ ಬಳಸದೇ ಆರ್ಥಿಕ ವರ್ಷದ ಅಂತ್ಯದವರೆಗೂ ಕಾಯ್ದಿರಿಸಬಾರದೆಂದು ತಿಳಿಸಲಾಗಿದೆ. ಸಕಾಲದಲ್ಲಿ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಬಳಕೆ ಪ್ರಮಾಣ ಪತ್ರವನ್ನು ದಿನಾಂಕ : 15-10-2007 ರ ಒಳಗಾಗಿ ಕಳುಹಿಸುವಂತೆ ಸೂಚಿಸಿದೆ.

ಈ ಮೇಲಿನ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸಿ ಖರೀದಿ ಪ್ರಕ್ರಿಯೆಯನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸುವಂತೆ ಎಲ್ಲಾ ಉಪನಿರ್ದೇಶಕರುಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ.

(ಜಿ. ಕುಮಾರ ನಾಯಕ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯ,
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
4. ರಾಜ್ಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
5. ರಾಜ್ಯ ಎಲ್ಲಾ ಖಜಾನಾಧಿಕಾರಿಗಳಿಗೆ ಮಾಹಿತಿಗಾಗಿ
6. ಉಪನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ ರೂ.10.10 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿರುವಂತೆ ಆಯಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಖಜಾನೆಯಲ್ಲಿ ಗಣಕೀಕರಣ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ..
7. ಕಛೇರಿ ಪ್ರತಿ

## ಅನುಬಂಧ-1

ಸಂಖ್ಯೆ : ಸಿಪಿಐ/ಇ-ಆಡಳಿತ/ಹೆಚ್.ಆರ್.ಎಂ.ಎಸ್-9/07-08

ದಿನಾಂಕ : 28-08-2007

**2007-08 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಹೆಚ್.ಆರ್.ಎಂ.ಎಸ್ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಒಂದು ತಿಂಗಳಿಗಾಗಿ ಡಾಟಾ ಎಂಟ್ರಿ ಆಪರೇಟರ್ ಹಾಗೂ ಮುದ್ರಣ ಮತ್ತು ಸ್ಟೇಷನರಿ ಖರೀದಿಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮರುಹಂಚಿಕೆ ಮಾಡಲು ಜಿಲ್ಲಾ ಉಪನಿರ್ದೇಶಕರುಗಳಿಗೆ ಹಂಚಿಕೆ ಮಾಡಿರುವ ಹಣ**

| ಕ್ರ.ಸಂ | ಜಿಲ್ಲೆಗಳು | ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗಳ ಸಂಖ್ಯೆ | ಅನುದಾನ | ಜಿಲ್ಲಾವಾರು ಹಂಚಿಕೆ ಹಣ |
|---|---|---|---|---|
| 1 | ಬೆಂಗಳೂರು ಉತ್ತರ | 04 | 05 | 20000 |
| 2 | ಬೆಂಗಳೂರು ದಕ್ಷಿಣ | 05 | 05 | 25000 |
| 3 | ಬೆಂಗಳೂರು ಗ್ರಾಮಾಂತರ | 08 | 05 | 40000 |
| 4 | ಚಿಕ್ಕಬಳ್ಳಾಪುರ | 06 | 05 | 30000 |
| 5 | ಕೋಲಾರ | 06 | 05 | 30000 |
| 6 | ಚಿತ್ರದುರ್ಗ | 06 | 05 | 30000 |
| 7 | ದಾವಣಗೆರೆ | 07 | 05 | 35000 |
| 8 | ಶಿವಮೊಗ್ಗ | 07 | 05 | 35000 |
| 9 | ತುಮಕೂರು | 06 | 05 | 30000 |
| 10 | ಮಧುಗಿರಿ | 04 | 05 | 20000 |
| 11 | ಬೆಳಗಾವಿ | 06 | 05 | 30000 |
| 12 | ಚಿಕ್ಕೋಡಿ | 08 | 05 | 40000 |
| 13 | ಬಾಗಲಕೋಟೆ | 06 | 05 | 30000 |
| 14 | ಬಿಜಾಪುರ | 07 | 05 | 35000 |
| 15 | ಧಾರವಾಡ | 06 | 05 | 30000 |
| 16 | ಗದಗ್ | 06 | 05 | 30000 |
| 17 | ಹಾವೇರಿ | 07 | 05 | 35000 |
| 18 | ಉತ್ತರ ಕನ್ನಡ | 11 | 05 | 55000 |
| 19 | ಗುಲ್ಬರ್ಗಾ | 07 | 05 | 35000 |
| 20 | ಯಾದಗಿರಿ | 04 | 05 | 20000 |
| 21 | ಬೀದರ್ | 05 | 05 | 25000 |
| 22 | ಬಳ್ಳಾರಿ | 08 | 05 | 40000 |
| 23 | ಕೊಪ್ಪಳ | 04 | 05 | 20000 |
| 24 | ರಾಯಚೂರು | 05 | 05 | 25000 |
| 25 | ಮೈಸೂರು | 09 | 05 | 45000 |
| 26 | ಚಾಮರಾಜನಗರ | 05 | 05 | 25000 |
| 27 | ಕೊಡಗು | 03 | 05 | 15000 |
| 28 | ಮಂಡ್ಯ | 08 | 05 | 40000 |
| 29 | ಹಾಸನ | 08 | 05 | 40000 |
| 30 | ಚಿಕ್ಕಮಗಳೂರು | 08 | 05 | 40000 |
| 31 | ದಕ್ಷಿಣ ಕನ್ನಡ | 07 | 05 | 35000 |
| 32 | ಉಡುಪಿ | 05 | 05 | 25000 |
| | **ಒಟ್ಟು** | **202** | | **1010000** |

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ : ಸಿಪಿಐ/ಇ–ಆಡಳಿತ/ಹೆಚ್.ಆರ್.ಎಂ.ಎಸ್–10/07–08 ದಿನಾಂಕ : 28–08–2007

**ಜ್ಞಾಪನಾ**

**ವಿಷಯ : ಶಿಕ್ಷಣ ಇಲಾಖೆಯಲ್ಲಿ ಹೆಚ್.ಆರ್.ಎಂ.ಎಸ್ ಯೋಜನೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಸೂಚನೆಗಳ ಬಗ್ಗೆ**

ಶಿಕ್ಷಣ ಇಲಾಖೆಯಲ್ಲಿ ಹೆಚ್.ಆರ್.ಎಂ.ಎಸ್ ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಇಲಾಖೆಯ ಅಧಿಕಾರಿಗಳು ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಅನುಸರಿಸುವುದು.

| ಕ್ರ.ಸಂ | ವಿವರಗಳು | ದಿನಾಂಕ |
|---|---|---|
| 1 | ಹೆಚ್.ಆರ್.ಎಂ.ಎಸ್ ತಂತ್ರಾಂಶದ ಅನುಬಂಧ–1,2,3 ನಮೂನೆಗಳಲ್ಲಿ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿರುವಂತೆ, ಇ–ಆಡಳಿತ ಸಚಿವಾಲಯದಲ್ಲಿ ನೀಡಿದ ತರಬೇತಿಯಲ್ಲಿ ಸೂಚಿಸಿದಂತೆ ಇತ್ತೀಚಿನ ಮಾಹಿತಿಯನ್ನು ಡಾಟಾ ಎಂಟ್ರಿ ಮಾಡುವುದು. | 01–09–2007 ರಿಂದ 10–09–2007 |
| 2 | ಡಾಟಾ ಎಂಟ್ರಿ ಮಾಡಿದ ಮಾಹಿತಿಯನ್ನು ಮುದ್ರಿಸಿ ಕೂಲಂಕುಶವಾಗಿ ಆಯಾ ಬ್ಲಾಕ್‌ನಲ್ಲಿರುವ ಸಂಬಂಧಪಟ್ಟ ಕಾರ್ಯನಿರ್ವಾಹಕರು ಶೇ 100 ರಷ್ಟು ಪರಿಶೀಲಿಸಿ ಮುದ್ರಿತ ಪ್ರತಿಯ ಮೇಲೆ ಕಾರ್ಯನಿರ್ವಾಹಕರ ಹೆಸರು, ಹುದ್ದೆ ಹಾಗೂ ಸಹಿಯನ್ನು ಮಾಡುವುದು(ಡಾಟಾ ಎಂಟ್ರಿ ವಲಯವಾರು ಮುಗಿದಂತೆ ಅಗಿಂದ್ದಾಗೆ ಮಾಹಿತಿಯನ್ನು ಮುದ್ರಿಸಿ ಪರಿಶೀಲನೆ ಪ್ರಾರಂಭಿಸುವುದು) | 13–09–2007 ರೊಳಗಾಗಿ |
| 3 | ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿರುವ ಮ್ಯಾನೇಜರ್‌ರವರು ಶೇ 100 ರಷ್ಟು ಮುದ್ರಿತ ಪ್ರತಿಯನ್ನು ಪರಿಶೀಲಿಸಿ ಹೆಸರು, ಹುದ್ದೆ ಹಾಗೂ ಸಹಿಯನ್ನು ಮಾಡುವುದು. | 19–09–2007 ರೊಳಗಾಗಿ |
| 4 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಶೇ 100 ರಷ್ಟು ಮುದ್ರಿತ ಪ್ರತಿಯನ್ನು ಪರಿಶೀಲಿಸಿ ಹೆಸರು, ಹುದ್ದೆ ಹಾಗೂ ಸಹಿಯನ್ನು ಮಾಡುವುದು. | 22–09–2007 ರೊಳಗಾಗಿ |
| 5 | ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಬ್ಲಾಕ್‌ಗಳಲ್ಲಿನ ಕ್ಲಸ್ಟರ್‌ಗಳನ್ನು (ಯಾವುದೇ ಕ್ಲಸ್ಟರ್‌ನ್ನು ಹೊರತುಪಡಿಸದೇ) ಪ್ರತಿ ಬ್ಲಾಕಿನಲ್ಲಿ ಶೇ 20 ರಷ್ಟು ಮುದ್ರಿತ ಪ್ರತಿಯನ್ನು ಪರಿಶೀಲಿಸಿ ಹೆಸರು, ಹುದ್ದೆ ಹಾಗೂ ಸಹಿಯನ್ನು ಮಾಡುವುದು. | 28–09–2007 ರೊಳಗಾಗಿ |
| 6 | ಕ್ಷೇತ್ರಶಿಕ್ಷಣಾಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನೌಕರರ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸುವುದನ್ನು ಪರಿಶೀಲಿಸಿದ ಅನುಬಂಧಗಳನ್ನು ದೃಢೀಕರಿಸಿ ಇದರೊಂದಿಗೆ ಲಗತ್ತಿಸಿದ ದೃಢೀಕರಣ ಪತ್ರದೊಂದಿಗೆ ಸಂಬಂಧಪಟ್ಟ ಉಪನಿರ್ದೇಶಕರಿಗೆ ಹಾಗೂ ಆಯುಕ್ತರ ಕಛೇರಿಯ ಇ–ಆಡಳಿತ ಶಾಖೆಯ ಮುಖ್ಯಸ್ಥರಿಗೆ ಸಿ.ಡಿ, ಮುದ್ರಿತ ದೃಢೀಕರಿಸಿದ ಪ್ರತಿಯನ್ನು ಹಾಗೂ ನೌಕರರ ಮಾಹಿತಿಯನ್ನು ಇ–ಮೇಲ್ ಮೂಲಕ ಕಳುಹಿಸುವುದು. (ದೃಢೀಕರಣ ಪತ್ರ ಲಗತ್ತಿಸಿದೆ.) ಇ–ಮೇಲ್ ವಿಳಾಸ egovstateunit@gmail.com | 29–09–2007 ರೊಳಗಾಗಿ |

| | | |
|---|---|---|
| 7 | ಜಿಲ್ಲಾ ಉಪನಿರ್ದೇಶಕರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನೌಕರರ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸುವುದನ್ನು ಪರಿಶೀಲಿಸಿದ ಅನುಬಂಧಗಳು ಹಾಗೂ ಈ ಬಗ್ಗೆ ಇದರೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ದೃಢೀಕರಣವನ್ನು ಆಯುಕ್ತರ 'ಕಛೇರಿಯ ಇ-ಆಡಳಿತ ಶಾಖೆಯ ಮುಖ್ಯಸ್ಥರಿಗೆ ಕಳುಹಿಸುವುದು. (ದೃಢೀಕರಣ ಪತ್ರ ಲಗತ್ತಿಸಿದೆ.) | 30-09-2007 |

ಯಾವುದೇ ಕಾರಣಕ್ಕೂ ನೀಡಿರುವ ಮಾಹಿತಿಗಳು ತಪ್ಪಿದ್ದಲ್ಲಿ ಮೇಲ್ಕಂಡ ಎಲ್ಲಾ ಸಂಬಂಧಪಟ್ಟವರು ಜವಾಬ್ದಾರರಾಗಿರುತ್ತಾರೆ.

ಈ ರೀತಿ ಸಹಿ ಮಾಡಿದ ಪ್ರತಿಗಳನ್ನು ಡಿ.ಸಿ ಕಚೇರಿಯ ಹೆಚ್.ಕ್ಯೂ.ಎ ರವರಿಗೆ ಸಲ್ಲಿಸಿ ಅವರಿಂದ ಮೇಲು ಸಹಿ ಮಾಡಿಸಿಕೊಳ್ಳಬೇಕು.

ಹೆಚ್.ಕ್ಯೂ.ಎ ರವರು ಸಹಿ ಮಾಡಿದ ಪ್ರತಿಗಳನ್ನು ಮಾನ್ಯ ಕಾರ್ಯದರ್ಶಿಗಳು, ಇ-ಆಡಳಿತ ಸಚಿವಾಲಯಕ್ಕೆ ಸಲ್ಲಿಸಬೇಕು. ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯ ಬ್ಲಾಕ್‌ಗಳಲ್ಲಿ ಹೆಚ್.ಆರ್.ಎಂ.ಎಸ್ ಯೋಜನೆಯ ಅನುಷ್ಠಾನದ ಬಗ್ಗೆ ತೀವ್ರವಾಗಿ ನಿಗಾವಹಿಸುವುದು.

ಈ ಎಲ್ಲಾ ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಯಾವುದೇ ಕಾರಣಕ್ಕೂ ಶಿಕ್ಷಕರು/ಸಿಬ್ಬಂದಿಯ ವೇತನ ಬಿಡುಗಡೆಯಲ್ಲಿ ವಿಳಂಬವಾಗದಂತೆ ಕಾರ್ಯನಿರ್ವಹಿಸುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

(ಜಿ. ಕುಮಾರ ನಾಯಕ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳನ್ನು:

1 ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯ,
2 ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ,
3 ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ), ಇವರಿಗೆ.
4 ರಾಜ್ಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
5 ರಾಜ್ಯ ಎಲ್ಲಾ ಖಜಾನಾಧಿಕಾರಿಗಳಿಗೆ,
6 ಕಛೇರಿ ಪ್ರತಿ

# ದೃಢೀಕರಣ ಪತ್ರ

ಶ್ರೀಮತಿ/ಶ್ರೀ ______________________ ಆದ ನಾನು ______________ ಜಿಲ್ಲೆಯಲ್ಲಿ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ಸದರಿ ಜಿಲ್ಲೆಯಲ್ಲಿ ಹೆಚ್.ಆರ್.ಎಂ.ಎಸ್ ಅನುಷ್ಠಾನದ ನಿಟ್ಟಿನಲ್ಲಿ ಜಿಲ್ಲೆಯ ವ್ಯಾಪ್ತಿಯ ಎಲ್ಲಾ ಬ್ಲಾಕ್‌ಗಳಲ್ಲಿ, ಎಲ್ಲಾ ಕ್ಲಸ್ಟರ್‌ಗಳನ್ನು ಒಳಗೊಂಡಂತೆ ನೌಕರರ ಸಂಖ್ಯೆಗೆ ಅನುಗುಣವಾಗಿ ಶೇ 20 ರಷ್ಟು ನೌಕರರ ಸಂಪೂರ್ಣ ಮಾಹಿತಿಯನ್ನು ಸೇವಾ ಪುಸ್ತಕ ಹಾಗೂ ಇನ್ನಿತರ ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ದೃಢೀಕರಿಸಿದ ನಮೂನೆಗಳನ್ನು ಇದರೊಂದಿಗೆ ಲಗತ್ತಿಸಿದೆ.

______________ಜಿಲ್ಲಾ ವ್ಯಾಪ್ತಿಯ ಎಲ್ಲಾ ನೌಕರರ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

| ಕ್ರ.ಸಂ | ಬ್ಲಾಕ್‌ನ ಹೆಸರು | ಪರಿಶೀಲಿಸಿದ ನೌಕರರ ಸಂಖ್ಯೆ |
|---|---|---|
| 1 | | |
| 2 | | |
| 3 | | |
| 4 | | |
| 5 | | |
| | ಒಟ್ಟು | |

ಉಪನಿರ್ದೇಶಕರ ಸಹಿ/- ______________

ಉಪನಿರ್ದೇಶಕರ ಹೆಸರು ______________

ಜಿಲ್ಲೆಯ ಹೆಸರು ______________

ದಿನಾಂಕ : ______________

# ದೃಢೀಕರಣ ಪತ್ರ

ಶ್ರೀಮತಿ/ಶ್ರೀ ______________________ ಆದ ನಾನು ______________ ಜಿಲ್ಲೆಯ ______________ ಬ್ಲಾಕಿನಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ಈ ಬ್ಲಾಕಿನಲ್ಲಿ ಹೆಚ್.ಆರ್.ಎಂ.ಎಸ್ ಅನುಷ್ಠಾನದ ನಿಟ್ಟಿನಲ್ಲಿ ಬ್ಲಾಕಿನ ವ್ಯಾಪ್ತಿಯ ಎಲ್ಲಾ ಕ್ಲಸ್ಟರ್‌ಗಳನ್ನು ಒಳಗೊಂಡಂತೆ ಎಲ್ಲಾ ನೌಕರರ ಅಂದರೆ ಶೇ 100 ರಷ್ಟು ಸಂಪೂರ್ಣ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಸೇವಾ ಪುಸ್ತಕ ಹಾಗೂ ಇನ್ನಿತರ ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ದೃಢೀಕರಿಸಿದ ನಮೂನೆಗಳನ್ನು ಇದರೊಂದಿಗೆ ಲಗತ್ತಿಸಿದೆ.

______________ಬ್ಲಾಕ್ ವ್ಯಾಪ್ತಿಯ ಎಲ್ಲಾ ನೌಕರರ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.
(ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯನ್ನು ಒಳಗೊಂಡಂತೆ)

| ಕ್ರ.ಸಂ | ಕ್ಲಸ್ಟರ್‌ನ ಹೆಸರು | ಪರಿಶೀಲಿಸಿದ ನೌಕರರ ಸಂಖ್ಯೆ |
|---|---|---|
| 1 | | |
| 2 | | |
| 3 | | |
| 4 | | |
| 5 | | |
| | ಒಟ್ಟು | |

ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿ/- ______________
ಕ್ಷೇತ್ರ ಶಿಕ್ಷಣಾಧಿಕಾರಿಗಳ ಹೆಸರು ______________
ಬ್ಲಾಕ್‌ನ ಹೆಸರು ______________
ಜಿಲ್ಲೆಯ ಹೆಸರು ______________
ದಿನಾಂಕ : ______________